ಕರ್ನಾಟಕ ಸರ್ಕಾರ

ಸೌಜನ್ಯ, ಭಾ.ಆ.ಸೇ.,
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ
ನೃಪತುಂಗ ರಸ್ತೆ, ಬೆಂಗಳೂರು-1

ಅ ಸ ಪ ಸಂಖ್ಯೆ:ಹೆಚ್.ಆರ್.ಎಂ.ಎಸ್.ವೇ.ಇ.ಬಿ–1/2016–17

ದಿನಾಂಕ:05ನೇ ಮೇ 2017

ಮಾನ್ಯರೇ,

ವಿಷಯ: ಮಾನವ ಸಂಪನ್ಮೂಲ ಯೋಜನೆಯಲ್ಲಿ ದಿನಾಂಕ:28.03.2017 ಮತ್ತು 19.04.2017ರ ನಡುವೆ ಅನುಮೋದನೆ ಮಾಡಿದ ವೇತನ ಮತ್ತು ಇತರೆ ಬಿಲ್ಲುಗಳನ್ನು ಪುನರ್ ಪರಿಶೀಲಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಉಪಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ–ಆಡಳಿತ) ರವರ ಸುತ್ತೋಲೆ ಪತ್ರ ಸಂ. ಸಿಆಸುಇ21 ಇಆಇ 2017 ದಿನಾಂಕ:03.05.2017

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ರವರ ಅಸಪ ಸಂಖ್ಯೆ: ಇಡಿ 88 ಯೋಯೋಕ 2017 ದಿನಾಂಕ:04.05.2017.

&&&

ಉಲ್ಲೇಖ(1)ರ ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ರವರ ಪತ್ರ ಕ್ರಮಾಂಕದ ದಿನಾಂಕದ ಸುತ್ತೋಲೆಯಲ್ಲಿ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಹೆಚ್.ಆರ್.ಎಂ.ಎಸ್.) ಯಡಿ ದಿನಾಂಕ:28.03.2017 ರಿಂದ 19.04.2017ರ ಅವಧಿಯಲ್ಲಿ ಅಳವಡಿಸಿದ ದಾಖಲೆಗಳಲ್ಲಿ ಹಾಗೂ ಅನುಮೋದಿಸಿ ಸೆಳೆದ ಬಿಲ್ಲುಗಳಲ್ಲಿ ಹಲವು ವ್ಯತ್ಯಾಸ/ನ್ಯೂನ್ಯತೆಗಳಿರುವುದು ಕಂಡು ಬಂದಿರುವುದಾಗಿ ತಿಳಿಸಲಾಗಿರುತ್ತದೆ. ಸದರಿ ಸುತ್ತೋಲೆ ಪ್ರತಿಯನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದ ಎಲ್ಲಾ ಡಿಡಿಓ ಗಳ ಲಾಗಿನ್‌ನಲ್ಲಿ ಸಹ ಅಲರ್ಟ್ ನೀಡಿದ್ದು, [All DDOs must read this HRMS Circular] ಸದರಿ ಸಂದೇಶವನ್ನು ಹಾಗೂ ಸಂದೇಶದ ಸುತ್ತೋಲೆಯಲ್ಲಿ ತಿಳಿಸಲಾಗಿರುವ ಅಂಶಗಳನ್ನು ಕಡ್ಡಾಯವಾಗಿ ವೇತನ ಸೆಳೆಯುವ/ವೇತನ ಬಟವಾಡೆ ಅಧಿಕಾರಿಗಳು [ಡಿಡಿಓ] ಕಡ್ಡಾಯವಾಗಿ ಗಮನಿಸಲು ಸೂಚಿಸಿದೆ.

ಮೇಲ್ಕಂಡ ಅವಧಿಯಲ್ಲಿನ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಿದ ದಾಖಲೆಗಳನ್ನು ಕೂಲಂಕುಷವಾಗಿ/ಸೂಕ್ಷ್ಮವಾಗಿ ಪರಿಶೀಲಿಸಿ ಸರಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ತಿಳಿಸಿದೆ. ಒಂದು ವೇಳೆ ದಾಖಲೆಯಲ್ಲಿ ವ್ಯತ್ಯಾಸಗಳಿದ್ದಲ್ಲಿ "ಬದಲಾದ ದಾಖಲೆ", "ಇರಬೇಕಾದ ದಾಖಲೆ" ಇವುಗಳನ್ನು ಇಲಾಖೆಯ ಹೆಚ್.ಆರ್.ಎಂ.ಎಸ್. ನೋಡಲ್ ಅಧಿಕಾರಿಗಳ ಮೂಲಕ

ಸರಿಪಡಿಸಿಕೊಳ್ಳಲು ಈ ಮೂಲಕ ಎಲ್ಲಾ ವೇತನ ಸೆಳೆಯುವ /ವೇತನ ಬಟವಾಡೆ ಅಧಿಕಾರಿಗಳಿಗೆ ತಿಳಿಸಿದೆ. ಈ ಕಾರ್ಯವನ್ನು ದಿನಾಂಕ:12.05.2017ರ ಒಳಗೆ ಪೂರ್ಣಗೊಳಿಸಲು ಸೂಚಿಸಿದೆ.

ಯಾವುದೇ ಕಾರಣಕ್ಕೂ ಯೋಜನೆಯಿಂದಾದ ನೂನ್ಯತೆಯಿಂದಾಗಿ ಈಗಾಗಲೇ ಹೆಚ್.ಆರ್.ಎಂ.ಎಸ್. ಯೋಜನೆಯಲ್ಲಿ ಅನುಮೋದಿಸಿ ಸೆಳೆದಿರುವ ಬಿಲ್ಲುಗಳನ್ನು ಮತ್ತೊಮ್ಮೆ ತಯಾರಿಸಿ ದುರುಪಯೋಗ ಪಡಿಸಿಕೊಳ್ಳದಂತೆ ಎಲ್ಲಾ ವೇತನ ಸೆಳೆಯುವ/ವೇತನ ಬಟವಾಡೆ ಅಧಿಕಾರಿಗಳಿಗೆ ಗಮನಹರಿಸಲು ಸೂಚಿಸಿದೆ. ಒಂದು ವೇಳೆ ಹಾಗೇನಾದರೂ ದುರುಪಯೋಗ ಪಡಿಸಿಕೊಂಡಿದ್ದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ರಾಜ್ಯದ ಇಲಾಖೆಯ ಎಲ್ಲಾ ವೇತನ ಸೆಳೆಯುವ / ವೇತನ ಬಟವಾಡೆ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

\\10.96.135.22\e\d\hrms\sai ram\do letter.docx